4 △ CCE PF/NSR & NSPR(C)/500/6661

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]

Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]

Total No. of Questions : 57 ]

**ಸಂಕೇತ ಸಂಖ್ಯೆ : 96-K**

**Code No. : 96-K**

**C**

**CCE PF**
**UNREVISED**
**FULL SYLLABUS**
**NSR & NSPR**

**Question Paper Serial No. 500**

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

# ವಿಷಯ : ಅರ್ಥಶಾಸ್ತ್ರ

# Subject : ECONOMICS

**(ಕನ್ನಡ ಮಾಧ್ಯಮ / Kannada Medium)**

**(ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Fresh / NSR & NSPR)**

ದಿನಾಂಕ : 08. 04. 2023 ] [ Date : 08. 04. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. "ಒಂದು ರಾಷ್ಟ್ರವು ಬಡ ರಾಷ್ಟ್ರವಾಗಿದೆ. ಏಕೆಂದರೆ ಅದು ಬಡತನದಲ್ಲಿ ಇದೆ" ಎಂದು ಹೇಳಿದವರು

   (A) ಮೇಯರ್

   (B) ಬಾಲ್ಡ್‌ವಿನ್

   (C) ಜೆ.ಎಮ್. ಕೇನ್ಸ್

   (D) ರ್‍ಯಾಗ್ನರ್ ನರ್ಕ್ಸ್

2. 20ನೇ ಶತಮಾನದಲ್ಲಿ ಬಳಕೆಗೆ ಬಂದ ಅತ್ಯದ್ಭುತ ಲೋಹ

   (A) ಕಂಚು

   (B) ಅಭ್ರಕ

   (C) ಅಲ್ಯುಮಿನಿಯಂ

   (D) ಚಿನ್ನ

3. ಪೆಟ್ರೋಲಿಯಂನ್ನು ಹೀಗೆ ಕರೆಯುವರು

(A) ದ್ರವರೂಪದ ಚಿನ್ನ

(B) ದ್ರವರೂಪದ ಬೆಳ್ಳಿ

(C) ದ್ರವರೂಪದ ವಜ್ರ

(D) ದ್ರವರೂಪದ ಪ್ಲಾಟಿನಮ್

4. "ಮಾನವ ಅಭಿವೃದ್ಧಿಗಾಗಿ ಮಾಡಿದ ಹೂಡಿಕೆಯೇ ಬಂಡವಾಳ ವಿಧಗಳಲ್ಲಿ ಅತ್ಯಮೂಲ್ಯವಾದುದು" ಎಂದು ಹೇಳಿದವರು

(A) ಆಡಂ ಸ್ಮಿತ್

(B) ಆಲ್‌ಫ್ರೆಡ್ ಮಾರ್ಷಲ್

(C) ಅಮರ್ತ್ಯ ಸೇನ್

(D) ದಾದಾಭಾಯಿ ನವರೋಜಿ

5. ಖಾಯಂಗುತ್ತೆ ಪದ್ಧತಿಯನ್ನು ಜಾರಿಗೆ ತಂದವರು

(A) ವಿಲಿಯಂ ಬೆಂಟಿಂಕ್

(B) ವೆಲ್ಲೆಸ್ಲಿ

(C) ವಾರನ್ ಹೇಸ್ಟಿಂಗ್ಸ್

(D) ಕಾರನ್ ವಾಲಿಸ್

6. ಜಾಗಿರ್ ಗೇಣಿ ಮಧ್ಯವರ್ತಿಗಳ ನಿರ್ಮೂಲನಾ ಕಾನೂನನ್ನು ಜಾರಿಗೆ ತಂದ ಭಾರತದ ಕೊನೆಯ ರಾಜ್ಯ

(A) ಬಿಹಾರ

(B) ಮಧ್ಯಪ್ರದೇಶ

(C) ಪಶ್ಚಿಮ ಬಂಗಾಳ

(D) ಕರ್ನಾಟಕ

7. ಭಾರತೀಯ ಸ್ಟೇಟ್ ಬ್ಯಾಂಕಿನ ಹಳೆಯ ಹೆಸರು

(A) ಇಂಪೀರಿಯಲ್ ಬ್ಯಾಂಕ್

(B) ಇಂಡಿಯನ್ ಬ್ಯಾಂಕ್

(C) ಬ್ಯಾಂಕ್ ಆಫ್ ಬರೋಡ

(D) ಅಲಹಾಬಾದ್ ಬ್ಯಾಂಕ್

8. ಜವಾಹರ್ ರೋಜ್‌ಗಾರ್ ಯೋಜನೆಯ ಮುಖ್ಯ ಉದ್ದೇಶ

(A) ನೀರಾವರಿ ಸೌಲಭ್ಯ ಪೂರೈಕೆ

(B) ಉದ್ಯೋಗ ಸೃಷ್ಟಿ

(C) ತಂತ್ರಜ್ಞಾನದ ಅಭಿವೃದ್ಧಿ

(D) ಉತ್ತಮ ಆಡಳಿತ ನೀಡುವುದು

9. ಸುರೇಶ್ ತೆಂಡೂಲ್ಕರ್‌ರವರು ಬಡತನವನ್ನು ಅಳೆಯಲು ಬಳಸಿದ ಮಾನದಂಡ

(A) ತಲಾ ಅನುಭೋಗ ವೆಚ್ಚ

(B) ತಲಾ ಆದಾಯ

(C) ಪ್ರತಿದಿನ ಸೇವಿಸುವ ಕ್ಯಾಲರಿಗಳು

(D) ಶಿಕ್ಷಣ ಮತ್ತು ಆರೋಗ್ಯದ ಮೇಲಿನ ವೆಚ್ಚ

10. 1668 ರಲ್ಲಿ ರಿಕ್ಸ್ ಬ್ಯಾಂಕ್ ಸ್ಥಾಪನೆಯಾದದ್ದು

(A) ಫ್ರಾನ್ಸ್‌ನಲ್ಲಿ

(B) ಸ್ವೀಡನ್‌ನಲ್ಲಿ

(C) ಜಪಾನ್‌ನಲ್ಲಿ

(D) ಜರ್ಮನಿಯಲ್ಲಿ

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ಉತ್ತರ ರೈಲ್ವೆ ವಲಯ | (i) ಜೈಪುರ್ |
| (B) ಪಶ್ಚಿಮ ರೈಲ್ವೆ ವಲಯ | (ii) ಹುಬ್ಬಳ್ಳಿ |
| (C) ವಾಯುವ್ಯ ರೈಲ್ವೆ ವಲಯ | (iii) ಭುವನೇಶ್ವರ್ |
| (D) ನೈರುತ್ಯ ರೈಲ್ವೆ ವಲಯ | (iv) ಬಿಲಾಸ್‌ಪುರ್ |
| (E) ಪೂರ್ವ ಕರಾವಳಿ ರೈಲ್ವೆ ವಲಯ | (v) ಚೆನ್ನೈ |
| | (vi) ನವ ದೆಹಲಿ |
| | (vii) ಮುಂಬೈ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ವಿದೇಶಿ ವಿನಿಮಯದ ಅರ್ಥ ತಿಳಿಸಿ.

13. ಮಾನವ ಅಭಿವೃದ್ಧಿ ಸೂಚ್ಯಂಕವನ್ನು ರೂಪಿಸಿದವರು ಯಾರು ?

14. ಭಾರತದಲ್ಲಿ ತಲಾದಾಯವು ಕಡಿಮೆ ಇರಲು ಮುಖ್ಯ ಕಾರಣವೇನು ?

15. ಭಾರತವು ಅತಿ ಹೆಚ್ಚು ಆಮದು ಮಾಡುವ ವಸ್ತು ಯಾವುದು ?

16. ಭೂಬಳಕೆ ಎಂದರೇನು ?

17. ಅಂತರ್ಜಾಲ ಅರ್ಥ ಬರೆಯಿರಿ.

18. ಗಣಿಗಾರಿಕೆಯ ಅರ್ಥ ತಿಳಿಸಿ.

19. 1976 ರ ಸಮಗ್ರ ಜನಸಂಖ್ಯಾ ನೀತಿಯ ಪ್ರಮುಖ ಉದ್ದೇಶವೇನು ?

20. ಭಾರತದ ವಿದೇಶಿ ವ್ಯಾಪಾರದ ಮೇಲೆ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಯ ಪರಿಣಾಮವೇನು ?

21. ಜನಸಾಂದ್ರತೆಯನ್ನು ವ್ಯಾಖ್ಯಾನಿಸಿ.

22. ಭೂಸುಧಾರಣೆಗಳು ಎಂದರೇನು ?

23. ರೈತರು ಪಡೆಯುವ ಕೃಷಿ ಸಾಲದ ವಿಧಗಳನ್ನು ತಿಳಿಸಿ.

24. ಇತ್ತೀಚೆಗೆ ಜೀತ ಪದ್ಧತಿಯು ಬಹುತೇಕ ಕಡಿಮೆಯಾಗಿದೆ. ಏಕೆ ?

25. ಬಡತನ ರೇಖೆ ಎಂದರೇನು ?

26. ವಿದೇಶಿ ವ್ಯಾಪಾರದ ಅರ್ಥ ತಿಳಿಸಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**24 × 2 = 48**

27. ಅನಭಿವೃದ್ಧಿ ಆರ್ಥಿಕತೆಯ ಆರ್ಥಿಕ ಲಕ್ಷಣಗಳು ಯಾವುವು ?

28. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಮಾನವ ಬಂಡವಾಳದಲ್ಲಿ ಹೆಚ್ಚಳವಾಗುತ್ತಿದೆ. ಏಕೆ ?

29. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ಪಾತ್ರವನ್ನು ವಿವರಿಸಿ.

30. ಭಾರತದ ಜನಸಂಖ್ಯಾ ಬೆಳವಣಿಗೆಯ ನಾಲ್ಕು ಹಂತಗಳನ್ನು ತಿಳಿಸಿ.

31. ಕೃಷಿಯ ಉತ್ಪಾದಕತೆಯನ್ನು ಹೆಚ್ಚಿಸುವ ತಾಂತ್ರಿಕ ಅಂಶಗಳನ್ನು ಹೆಸರಿಸಿ.

32. ಭಾರತದಲ್ಲಿ ಕೃಷಿ ಹಣಕಾಸನ್ನು ಒದಗಿಸುವ ಸಾಂಸ್ಥಿಕೇತರ ಹಣಕಾಸಿನ ಮೂಲಗಳನ್ನು ಪಟ್ಟಿ ಮಾಡಿ.

33. "ಭಾರತವು ಸ್ವಾತಂತ್ರ್ಯ ಪಡೆದಾಗ ಕೈಗಾರಿಕೆಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದವು" ಕಾರಣಗಳನ್ನು ನೀಡಿ.

34. ಹೊಸ ತಂತ್ರಜ್ಞಾನದ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಸ್ಥಾಪನೆಯಾದ ಸಂಸ್ಥೆಗಳನ್ನು ಹೆಸರಿಸಿ.

35. ಕೈಗಾರಿಕಾ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಮುಂದಿಡಲು ಬಳಸುವ ನಾಲ್ಕು ಅಸ್ತ್ರಗಳನ್ನು ಹೆಸರಿಸಿ.

36. ಭಾರತದಲ್ಲಿ ಬಡತನಕ್ಕೆ ಕಾರಣಗಳು ಯಾವುವು ?

37. ಭಾರತದಲ್ಲಿ ರಸ್ತೆ ಸಾರಿಗೆಯು ಹಲವಾರು ಸಮಸ್ಯೆಗಳಿಂದ ಬಳಲುತ್ತಿದೆ. ಏಕೆ ?

38. ಹಣಕಾಸು ಮೇಲ್ವಿಚಾರಣೆ ಮಂಡಳಿಯ ಕಾರ್ಯಗಳನ್ನು ವಿವರಿಸಿ.

39. ಭಾರತೀಯ ರಿಸರ್ವ್ ಬ್ಯಾಂಕಿನ ನಾಲ್ಕು ತರಬೇತಿ ಸಂಸ್ಥೆಗಳನ್ನು ಹೆಸರಿಸಿ.

40. "ಭಾರತೀಯ ರಿಸರ್ವ್ ಬ್ಯಾಂಕ್ ಸರ್ಕಾರದ ಬ್ಯಾಂಕಾಗಿದೆ." ಸಮರ್ಥಿಸಿ.

41. ಮಣ್ಣಿನ ಸವೆತಕ್ಕೆ ಪ್ರಮುಖ ಕಾರಣಗಳನ್ನು ತಿಳಿಸಿ.

42. ಯಾವುದಾದರೂ ನಾಲ್ಕು ಮಣ್ಣಿನ ಸಂರಕ್ಷಣಾ ಕ್ರಮಗಳನ್ನು ತಿಳಿಸಿ.

43. ಭಾರತದಲ್ಲಿ ಮರಣದರ ಇಳಿಕೆಗೆ ಪ್ರಮುಖ ಕಾರಣಗಳು ಯಾವುವು ?

44. ಹಸಿರು ಕ್ರಾಂತಿಯ ಪ್ರಯೋಜನಗಳನ್ನು ಪಟ್ಟಿಮಾಡಿ.

45. ಲೇವಾದೇವಿಗಾರರಿಂದ ಸಿಗುವ ಅನುಕೂಲಗಳು ಯಾವುವು ?

46. 1991 ರ ಹೊಸ ಕೈಗಾರಿಕಾ ನೀತಿಯ ಪ್ರಮುಖ ಲಕ್ಷಣಗಳು ಯಾವುವು ?

47. ಕಾರ್ಮಿಕ ಸಂಘದ ಉದ್ದೇಶಗಳನ್ನು ಹೆಸರಿಸಿ.

48. ಆರ್ಥಿಕ ಮೂಲಭೂತ ಸೌಕರ್ಯಗಳನ್ನು ಹೆಸರಿಸಿ.

49. ಸಾರಿಗೆ ವ್ಯವಸ್ಥೆಯ ವಿಧಗಳನ್ನು ಪಟ್ಟಿಮಾಡಿ.

50. ಆರ್ಥಿಕ ಅಭಿವೃದ್ಧಿಯಲ್ಲಿ ಸಂಪರ್ಕದ ಪಾತ್ರವನ್ನು ವಿವರಿಸಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :** **6 × 3 = 18**

51. ಭಾರತದಲ್ಲಿ ಜನಸಂಖ್ಯಾ ಸ್ಫೋಟದಿಂದ ಉಂಟಾಗುವ ಪರಿಣಾಮಗಳು ಯಾವುವು ?

52. ಭೂ ಸುಧಾರಣೆಯ ಮಹತ್ವವನ್ನು ವಿವರಿಸಿ.

53. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕಿನ ಪ್ರಮುಖ ಕಾರ್ಯಗಳನ್ನು ತಿಳಿಸಿ.

54. ಕಾರ್ಮಿಕರ ಲಕ್ಷಣಗಳನ್ನು ಪಟ್ಟಿಮಾಡಿ.

55. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಮುಖ ಕಾರ್ಯಗಳನ್ನು ವಿವರಿಸಿ.

56. ವಿದೇಶಿ ವ್ಯಾಪಾರದ ಮಹತ್ವವನ್ನು ವಿವರಿಸಿ.

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :** **1 × 4 = 4**

57. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕೈಗಾರಿಕಾಭಿವೃದ್ಧಿಯ ಪಾತ್ರವನ್ನು ವಿವರಿಸಿ.

**4**